ಬರುತ್ತಿತ್ತು. ವೀರಪ್ಪನ್ ಕಾಟದಿಂದ ಆ ಸ್ಥಳಕ್ಕೆ ಪ್ರವಾಸಿಗರು ಹೆಚ್ಚು ಬರುವುದು ತಪ್ಪಿ ಮತ್ತು ಭಕ್ತಾದಿಗಳು ಕಡಿಮೆ ಬರುತ್ತಿದ್ದುದರಿಂದ ನಮಗೆ ಅಲ್ಲಿಂದ ಬರತಕ್ಕಂಥ ಆದಾಯ ಕೂಡ ಕಡಿಮೆಯಾಗಿತ್ತು. ಈಗ ಭಗವಂತನ ಕೃಪೆಯಿಂದ ವೀರಪ್ಪನ್‌ನ ಕಾಟ ತಪ್ಪಿದೆ. ಇದರಿಂದಾಗಿ ಮುಂದೆ ಅಲ್ಲಿ ಪ್ರವಾಸಿಗರು ಜಾಸ್ತಿಯಾಗುತ್ತಾರೆ. ಅಲ್ಲಿ ಮೂಲಭೂತ ಸೌಲಭ್ಯಗಳಿಗೇನಾದರೂ ಕೊರತೆ ಇದ್ದರೆ, ಅದನ್ನು ಸರಿಪಡಿಸಲಿಕ್ಕೆ ಸರ್ಕಾರ ಬದ್ಧವಾಗಿದೆ. ಅದನ್ನು ಖಂಡಿತ ಮಾಡುತ್ತೇವೆ. ಇನ್ನು ಮಾನ್ಯ ಸಚಿವರು ಗಣಿಗಾರಿಕೆ ಬಗ್ಗೆ ಹೇಳಿದ್ದಾರೆ. ಗಣಿಗಾರಿಕೆ ನನ್ನ ಪ್ರವಾಸೋದ್ಯಮ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ, ಅದು ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಕೇಳಿ, ಈ ಬಗ್ಗೆ ಕ್ಯಾಬಿನೆಟ್‌ನಲ್ಲಿ ತಂದು, ಅದರ ಬಗ್ಗೆ ಸೂಕ್ತವಾದಂತಹ ತೀರ್ಮಾನವನ್ನು ತೆಗೆದುಕೊಳ್ಳಲಿಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ನಾನು ಮಾಡುತ್ತೇನೆ ಎಂಬ ವಿಚಾರವನ್ನು ಮಾನ್ಯ ಗೌರವಾನ್ವಿತ ಸದಸ್ಯರಿಗೆ ನಾನು ಹೇಳಲಿಕ್ಕೆ ಬಯಸುತ್ತೇನೆ.

ಉಪಾಧ್ಯಕ್ಷರು:– ಇಲ್ಲಿಗೆ ಪ್ರಶ್ನೋತ್ತರ ಮುಕ್ತಾಯವಾಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಪ್ರಶ್ನೆಗಳು

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿ):– ಮಾನ್ಯ ಉಪಾಧ್ಯಕ್ಷರೆ, ದಿನಾಂಕ 4ನೇ ಜುಲೈ 2005ರ 22ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 200 ಪ್ರಶ್ನೆಗಳ ಪೈಕಿ 157 ಪ್ರಶ್ನೆಗಳಿಗೆ ಉತ್ತರಗಳನ್ನು ಸದನ ಗಳನ್ನು ಮಂಡಿಸುತ್ತಿದ್ದೇನೆ.

ಉಪಾಧ್ಯಕ್ಷರು:– ಮಂಡಿಸಲಾಯಿತು.

ಪ್ರಕಟಣೆ

ಉಪಾಧ್ಯಕ್ಷರು:– ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್, ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು, ಈ ದಿನ ಮಧ್ಯಾಹ್ನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭೋಜನ ಕೂಟವನ್ನು ಏರ್ಪಡಿಸಿರು ತ್ತಾರೆ. ಸದರಿ ಭೋಜನಕೂಟದಲ್ಲಿ ತಾವುಗಳೆಲ್ಲರೂ ಪಾಲ್ಗೊಳ್ಳಬೇಕೆಂದು ಈ ಮೂಲಕ ಕೋರಿದೆ.